ಸಾಕ್ಷಿಯನ್ನು ದಿಃ **28.08.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಆರ್ ಎಲ್ ವಕೀಲರಿಂದಃ-

ನನ್ನ ತಂದೆ ಮತ್ತು ತಾಯಿ ಅವರ ಜೀವಿತಾವಧಿಯವರೆಗೆ ನನ್ನ ಜೊತೆ, ವಾದಿ ಮತ್ತು 1ನೇ ಪ್ರತಿವಾದಿ ಜೊತೆ ಅನ್ಯೋನ್ಯತೆ ಇಂದ ಇದ್ದರು. ನನ್ನ ತಂದೆ ತಾಯಿ ಅವರು ಬದುಕಿರುವವರೆಗೆ ತಮ್ಮ 3 ಜನ ಮಕ್ಕಳ ಬಗ್ಗೆ ಏನೇ ಮಾಡಿದರು ಒಳ್ಳೆಯದನ್ನೇ ಬಯಸುತ್ತಿದ್ದರು ಎಂದರೆ ಸರಿ. ದಾವಾ ಐಟಂ ನಂಬರ್ 5 ರ ಸರ್ವೆ ನಂಬರ್ 60/P 78 ರಲ್ಲಿ 36 ಗುಂಟೆ ನನ್ನ ತಂದೆಗೆ ಸಾಗುವಳಿ ಮೂಲಕ ಬಂದಿದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅದನ್ನು ನನಗೆ ಮೃತ್ಯು ಪತ್ರ ಮಾಡಿಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂಬರ್ 5 ರ ಬಗ್ಗೆ ಯಾವುದೇ ಮೃತ್ಯು ಪತ್ರ ಬರೆಯುವ ಅಧಿಕಾರ ನನ್ನ ತಂದೆಗೆ ಇರಲಿಲ್ಲ ಎಂದರೆ ಗೊತ್ತಿಲ್ಲ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ಅದರಲ್ಲಿ ಬರೆದ ವಿಷಯಗಳು ನಾನು ಓದಿ ತಿಳಿದುಕೊಂಡಿದ್ದೇನೆ. ಅಣ್ಣರಾಪುರದ ಗ್ರಾಮದ ಸರ್ವೆ ನಂಬರ್ 60/47P1 ರಲ್ಲಿ 4 ಎಕರೆ, ದೈತ್ಯನಕೆರೆ ಕಾವಲು ಗ್ರಾಮದ ಸರ್ವೆ ನಂಬರ್ 1/13ಬಿ ಅಲ್ಲಿ 4 ಎಕರೆ 12 ಗುಂಟೆ, ಅಸ್ವಾಳು ಗ್ರಾಮದ ಸರ್ವೆ ನಂಬರ್ 71/3 ರಲ್ಲಿ 1 ಎಕರೆ 2 ಗುಂಟೆ, ಸರ್ವೆ ನಂಬರ್ 71/5 ರಲ್ಲಿ 19 ಗುಂಟೆ ಮತ್ತು ಸರ್ವೆ ನಂಬರ್ 73/5 ರಲ್ಲಿ 35 ಗುಂಟೆ ನನ್ನ ಮಾಲೀಕತ್ವದಲ್ಲಿ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಈ ದಾವೆಯ 3ನೇ ಪ್ರತಿವಾದಿ ನನ್ನ ಮಗ. ನನ್ನ ತಂದೆಯಿಂದ ನನಗೆ ಭಾಗಾಂಶದ ಮೂಲಕ ಬಂದಂತಹ ಆಸ್ತಿಯಲ್ಲಿ ಮಾತ್ರ 3ನೇ ಪ್ರತಿವಾದಿಗೆ ಹಕ್ಕಿದೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ನನಗೆ ಬಂದಂತಹ 7 ಎಕರೆ 9 ಗುಂಟೆಯನ್ನು 3ನೇ ಪ್ರತಿವಾದಿಗೆ ಕೊಟ್ಟಿದ್ದೇನೆ ಎಂದು ನುಡಿಯುತ್ತಾರೆ. ವಾದಿ, ನನ್ನ ಮತ್ತು 2ನೇ ಪ್ರತಿವಾದಿಯ ಮಧ್ಯೆ ಭಾಗ ಆಗಿದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಸಾಕ್ಷಿಯು ಮುಂದುವರೆದು ಮೃತ್ಯು ಪತ್ರದಲ್ಲಿ ಆ ಬಗ್ಗೆ ಬರೆದಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಈ ದಾವೆ ಸಲ್ಲಿಸುವ ಕಾಲಕ್ಕೆ ನನ್ನ ಮಗನಾದ 3ನೇ ಪ್ರತಿವಾದಿಗೆ ಸುಮಾರು 20-21 ವರ್ಷ ವಯಸ್ಸಾಗಿತ್ತು ಎಂದರೆ ಇರಬಹುದು. ನನ್ನ ಮಗ 3ನೇ ಪ್ರತಿವಾದಿ ಡಿಪ್ಲೋಮಾ ಓದಿದ್ದಾರೆ ಈಗ ಅವರು ವ್ಯವಸಾಯ ಮಾಡುತ್ತಿದ್ದಾರೆ. ನನ್ನ ಮಗ ಡಿಪ್ಲೋಮಾ ಪದವಿಯನ್ನು ಮೈಸೂರಿನಲ್ಲಿ ಮುಗಿಸಿದ್ದಾರೆ. ಆ ಸಮಯದಲ್ಲಿ 3ನೇ ಪ್ರತಿವಾದಿ ಮೈಸೂರಿನಲ್ಲಿ ಪಿಜಿ ಯಲ್ಲಿ ಇದ್ದುಕೊಂಡು ಓದಿದ್ದಾರೆ ಎಂದರೆ

ಸರಿಯಲ್ಲ ಮನೆಯಿಂದ ಓಡಾಡುತ್ತಿದ್ದರು. ನನ್ನ ತಂದೆ ಅವರ ಎಲ್ಲಾ ಮೊಮ್ಮಕ್ಕಳ ಜೊತೆ ಅನ್ಯೋನ್ಯತೆಯಿಂದ ಇದ್ದರು. 2011 ರಿಂದಲೂ ನನ್ನ ತಂದೆ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. 2011 ರಿಂದ ಅವರ ಆರೋಗ್ಯ ಕೆಟ್ಟಿತ್ತು. 2010 ರಿಂದಲೂ ನನ್ನ ತಂದೆ ಪಾರ್ಶ್ವವಾಯು ಖಾಯಿಲೆಗಾಗಿ ಮೈಸೂರಿನ ಅಪೊಲೋ ಆಸ್ಪತ್ರೆಯಿಂದ ನಿರಂತರವಾಗಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ ಮನೆಯಲ್ಲೇ ಇದ್ದರು. ಈಗ ತೋರಿಸುತ್ತಿರುವ ದಾಖಲೆ ನನ್ನ ತಂದೆ 2010 ರಿಂದಲೂ ಅಪೊಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬಗ್ಗೆ ಇರುವ ದಾಖಲೆ ಎಂದರೆ ನನಗೆ ಗೊತ್ತಿಲ್ಲ. ನಾನು ನನ್ನ ತಂದೆಗೆ 2 ತಿಂಗಳಿಗೊಮ್ಮೆ ಅಪೊಲೋ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ಕೊಡಿಸುತ್ತಿದ್ದೆ.

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ನನ್ನ ತಂದೆ ಬಿ ಕೆಂಪೇಗೌಡರವರು ಮರಣ ಹೊಂದಿರುತ್ತಾರೆ, ಬಿ ಕೆಂಪೇಗೌಡರವರ ಮರಣಾನಂತರ ಬಿ ಕೆಂಪೇಗೌಡರವರ ಕಾನೂನುಬದ್ಧ ವಾರಸುದಾರರಾದ ನಾನು, 1ನೇ ಪ್ರತಿವಾದಿ ಮತ್ತು ವಾದಿ ಸದರಿ ಪರಿಹಾರದ ಹಣವನ್ನು ಸಮವಾಗಿ ಪಡೆದುಕೊಂಡಿರುತ್ತೇವೆ ಎಂದು ಬರೆಸಿದ್ದೇನೆ ಎಂದರೆ ಸರಿ. ನನ್ನ ತಂದೆಯ ಮರಣಾನಂತರ ನಾನು, ವಾದಿ ಮತ್ತು 1ನೇ ಪ್ರತಿವಾದಿ ನನ್ನ ತಂದೆಯ ಎಲ್ಲಾ ಆಸ್ತಿಗಳಿಗೆ ಸಮನಾದ ಹಕ್ಕುದಾರರು ಎಂದರೆ ವಾದಿಗೆ ತಂದೆ ಬದುಕಿದ್ದಾಗಲೆ ಹಿಸ್ಸೆ ಕೊಟ್ಟಿದ್ದಾರೆ. ವಾದಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂದು ನಾನು ಮತ್ತು 1ನೇ ಪ್ರತಿವಾದಿ ಶಾಮೀಲಾಗಿ ಮೃತ್ಯು ಪತ್ರವನ್ನು ಸೃಷ್ಠಿ ಮಾಡಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳ ಬಗ್ಗೆ ವಾದಿಗೆ 1ನೇ 3 ಭಾಗದ ಹಿಸ್ಸೆಯನ್ನು ನೀಡಲು ನ್ಯಾಯಾಲಯ ಆದೇಶ ಮಾಡಿದರೆ ನನಗೆ ಯಾವುದೇ ತೊಂದರೆ ಉಂಟಾಗುವುದಿಲ್ಲ ಎಂದರೆ ವಾದಿಗೆ ಈಗಾಗಲೇ ಹಿಸ್ಸೆ ನೀಡಲಾಗಿದೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.